# ಎನ್‌ಐಟಿಕೆ ಆವರಣದಲ್ಲೇ ಮತ ಎಣಿಕೆ

ಮಂಗಳೂರು, ಎ. 7: ದಕ್ಷಿಣ ಕನ್ನಡ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಈ ಬಾರಿಯೂ ನಗರ ಹೊರ ವಲಯದ ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ನಡೆಯಲಿದೆ.

ಮೇ 10ರಂದು ಮತದಾನ ನಡೆಯಲಿದ್ದು ಮೇ 13ರಂದು ಫಲಿತಾಂಶ ಪ್ರಕಟವಾಗಲಿದೆ. ಸೂಕ್ತ ಸ್ಥಳ ಹುಡುಕಾಟ ನಡೆಸಿದ ಜಿಲ್ಲಾಡಳಿತ ಅಂತಿಮವಾಗಿ ಎನ್‌ಐಟಿಕೆಯ ಆವರಣವನ್ನೇ ಮತ ಎಣಿಕೆಗೆ ಅಂತಿಮಗೊಳಿಸಿದೆ.

ಸಾಮಾನ್ಯವಾಗಿ ಮತ ಎಣಿಕೆ ನಡೆಯುವ ಸಂದರ್ಭದಲ್ಲಿ ಎಣಿಕೆ ಕೇಂದ್ರದ ಹೊರಗೆ ಸಾಕಷ್ಟು ಜನ ಸೇರುತ್ತಾರೆ. ಹಾಗಾಗಿ ನಗರದ ಒಳವಲಯದ ಯಾವುದೇ ಶಾಲಾ ಕಾಲೇಜು ಆವರಣದಲ್ಲಿ ಮತ ಎಣಿಕೆ ನಡೆಸಿದರೆ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ತೊಡಕಾಗಬಹುದು. ಹಾಗಾಗಿ ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಮತ ಎಣಿಕೆ ಕಾರ್ಯವನ್ನು ಎನ್ ಐಟಿಕೆಗೆ ಸ್ಥಳಾಂತರಿಸಲಾಗಿತ್ತು.

2018ರ ವಿಧಾನಸಭಾ ಚುನಾವಣ ಮತ ಎಣಿಕೆ ಬೊಂದೇಲ್‌ನ ಮಹಾತ್ಮ ಗಾಂಧಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದಿತ್ತು. 2013ರಲ್ಲಿ ಕೆನರಾ ಕಾಲೇಜು, 2014ರ ಲೋಕಸಭಾ ಚುನಾವಣೆಯ ಮತ ಎಣಿಕೆ ಬೊಂದೇಲ್‌ನಲ್ಲಿ ಹಾಗೂ 2009ರಲ್ಲಿ ಕೆನರಾ ಕಾಲೇಜು ಆವರಣದಲ್ಲಿ ನಡೆಸಲಾಗಿತ್ತು. ಅದಕ್ಕೆ ಮೊದಲು ಸ್ಥಳೀಯ ಸಂಸ್ಥೆಗಳ ಚುನಾವಣ ಮತ ಎಣಿಕೆ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ನಡೆದಿತ್ತು.

> ದ.ಕ. ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ 1860 ಮತಗಟ್ಟೆಗಳಲ್ಲಿ ನಡೆಯುವ ಮತದಾನದ ಮತ ಎಣಿಕೆ ಮೇ 13ರಂದು ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ನಡೆಯಲಿದೆ. ಮೇ. 10ರಂದು ಮತದಾನದ ಬಳಿಕ ಮತ ಯಂತ್ರಗಳನ್ನು ಸಕಲ ಭದ್ರತೆಗಳೊಂದಿಗೆ ಎನ್‌ಐಟಿಕೆಯ ಸ್ಟ್ರಾಂಗ್ ರೂಂಗಳಲ್ಲಿ ಇರಿಸಲಾಗುತ್ತದೆ.
>
> **- ರವಿಕುಮಾರ್, ಎಂ.ಆರ್.,**
> ದ.ಕ. ಜಿಲ್ಲಾಧಿಕಾರಿ

ಬೊಂದೇಲ್‌ನ ಎಂಜಿಸಿ ಸೇರಿದಂತೆ ನಗರದ ಯಾವುದೇ ಕೇಂದ್ರಗಳಲ್ಲಿ ಮತ ಎಣಿಕೆ ನಡೆಸಬೇಕಾದರೆ ಸಂಚಾರ ವ್ಯವಸ್ಥೆಗೆ ಅಡಚಣೆ ಆಗುವ ಕಾರಣದಿಂದ ಕೆಲವು ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಬೇಕಾಗುತ್ತದೆ. 8 ಕ್ಷೇತ್ರಗಳ ಅಭ್ಯರ್ಥಿಗಳ ಬೆಂಬಲಿಗರು, ಸಾರ್ವಜನಿಕರು ಸೇರಿದಂತೆ ಸಾಕಷ್ಟು ಜನ ಕೇಂದ್ರದ ಸುತ್ತ ಸೇರುತ್ತಾರೆ. ಇವರನ್ನು ನಿಯಂತ್ರಿಸುವುದೂ ಪೊಲೀಸರಿಗೆ ತುಸು ಕಷ್ಟ. ಪಾಂಡೇಶ್ವರದ ರೊಸಾರಿಯೊ ಶಾಲೆ ಆಗಿರಲಿ, ಕೊಡಿಯಾಲ್‌ಬೈಲ್‌ನ ಕೆನರಾ ಕಾಲೇಜುಗಳು ನಗರದ ಹೃದಯ ಭಾಗದಲ್ಲಿದ್ದು, ಮತ ಎಣಿಕೆ ಸಂದರ್ಭ ವಾಹನ ಸಂಚಾರ ನಿರ್ಬಂಧಿಸಿದರೆ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತದೆ. ಬೊಂದೇಲ್‌ನ ಎಂಜಿಸಿ ಕಾಲೇಜಿನ ರಸ್ತೆ ಮಂಗಳೂರು ವಿಮಾನ ನಿಲ್ದಾಣಕ್ಕೆ ತೆರಳುವ ಪ್ರಮುಖ ರಸ್ತೆಯೂ ಆಗಿದ್ದು, ವಾಹನ ಸಂಚಾರ ನಿರ್ಬಂಧಿಸಿದರೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ ಎಂಬ ಕಾರಣಕ್ಕೆ ಕಳೆದ ಲೋಕಸಭಾ ಚುನಾಣೆಯಲ್ಲಿ ಮತ ಎಣಿಕೆಯನ್ನು ಎನ್‌ಐಟಿಕೆಗೆ ಸ್ಥಳಾಂತರಿಸಲಾಗಿತ್ತು. ಮಂಗಳೂರು ನಗರ ಮಾತ್ರವಲ್ಲದೆ, ಜಿಲ್ಲೆಯ ಎಲ್ಲ ಕ್ಷೇತ್ರಗಳಿಗೂ ಈ ಕೇಂದ್ರ ತುಸು ದೂರವೆನಿಸಿದರೂ ಇಲ್ಲಿ ಸಾಕಷ್ಟು ಸ್ಥಳವಿದೆ. ಹಾಗಾಗಿ ಸಂಚಾರ ವ್ಯವಸ್ಥೆಗೆ ಯಾವುದೇ ತೊಂದರೆ ಆಗುವುದಿಲ್ಲ ಎಂಬುದು ಜಿಲ್ಲಾಡಳಿತದ ಲೆಕ್ಕಾಚಾರ.

Udayavani, Date:08/04/23 p.no - 10